good traditions set up by the Karnataka Legislature in the past. I shall pray that the Karnataka Legislature will continue the glorious traditions set up in the past and be a model to other Legislatures,

Once again, I thank you all.

Yours sincerey,

Te. Hanumanthappa."

## Special Motion: re: Appreciation of The Services of Sri Te. Hanumanthappa on his Retirement from the Office of the Secretary. Karnataka Legislature

ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಗಳು).— ಸನ್ಮಾನ್ಯ ಅಧ್ಯಕ್ಷರೇ, ಈ ಮಾನ್ಯ ಸಭೆಯಂ ಪರವಾಗಿ ಒಂದು ಠರಾವನ್ನು ಇಲ್ಲಿ ಮಂಡಿಸಲು ತಮ್ಮ ಅಪ್ಪಣೆ ಬೇಡುತ್ತೇನೆ. ಠರಾವು ಏನೆಂದರೆ:—

" That Madam Speaker be requested to convey to Sri Te. Hanumanthappa, B. A. (Hons), B. L., on his retirement from the Office of the Secretary, Karnataka Legislature, an expression of Members' deep appreciation of the service which he has rendered to this House for the last 12 years, their admiration for his profound knowledge of its procedure and practice, their gratification for the help constantly and readily given to them, and their recognition of the great work he has done."

Madam Speaker, Motion Moved:

" That Madam Speaker be requested to convey to Sri Te. Hanumanthappa, B A. (Hons), B. L., on his retirement from the Office of the Secretary, Karnataka Legislature, an expression of Members' deep appreciation of the service which he has rendered to this House for the last 12 years, their admiration for his profound knowledge of its procedure and practice, their gratification for the help constantly and readily given to them, and their recognition of the great work he has done."

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರೇ, ತಮಗೆ ಮತ್ತು ಈ ಮಾನ್ಯ ಸಭೆಗೆ ಗೊತ್ತಿರುವ ಹಾಗೆ ಹಿಂದೆ ಇದ್ದಂಥ ಶ್ರೀಮಾನ್ ವೆಂಕಟರಮಣ ಅಯ್ಯರ್ ಅವರು ಬಹಳ ವರ್ಷಗಳಿಂದ ನಮ್ಮ ವಿಧಾನ ಮಂಡಲದ ಕಾರ್ಯದರ್ಶಿಗಳಾಗಿ ಕೆಲಸ ಮಾಡಿಕೊಂಡು ಬಂದಿದ್ದರು. ಅವರು ತುಂಬ ಅನುಭವಿಗಳಾಗಿದ್ದರಿಂದ ವರನ್ನು ನಿವೃತ್ತಿ ಮಾಡುವ ಸಂದರ್ಭ ಬಂದಾಗಲೆಲ್ಲ, ಅವರ ಸ್ಥಾನದಲ್ಲಿ ಯಾರನ್ನು ಕರೆಸಿ ತುಂಬಬೇಕು

ಎನ್ನುವ ಪ್ರಶ್ನೆ ಆಗಿಂದಾಗ್ಗೆ ನಮ್ಮ ಕಾರ್ಯಾಲಯದ ಮುಂದೆ ಮತ್ತು ಸರ್ಕಾರದ ಮುಂದೆ ಬರುತ್ತಿತ್ತು. ಆ ಸಂದರ್ಭದಲ್ಲಿ ಶ್ರೀಮಾನ್ ಹನುಮಂತಪ್ಪನವರು ಮದರಾಸು ಸರ್ಕಾರದ ಸೇವೆಯಲ್ಲಿರುವುದು ಸರ್ಕಾರಕ್ಕೆ ಗೊತ್ತಾಗಿ, ಅವರನ್ನು ನಮ್ಮ ವಿಧಾನ ಮಂಡಲದ ಕಾರ್ಯದರ್ಶಿಗಳನ್ನಾಗಿ ನೇಮಿಸುವುದಕ್ಕೆ ಲಾಯಕ್ ಆಗಿದ್ದಾರೆ, ಅಷ್ಟೇ ಅಲ್ಲ, ಶ್ರೀಮಾನ್ ವೆಂಕಟರಮಣ ಅಯ್ಯರ್ ಅವರಂಥ ಅನುಭವಿಗಳ ಜಾಗದಲ್ಲಿ ಅಷ್ಟೇ ಅನುಭವಪೂರಿತವಾದ ಮತ್ತು ಕಾರ್ಯದಕ್ಷತೆಯುಳ್ಳವರಾದ ಇವರನ್ನು ಕರೆಸಿಕೊಂಡರೆ, ಈ ಕಾರ್ಯ ಚೆನ್ನಾಗಿ ನಡೆಯುತ್ತದೆ ಎನ್ನುವ ವಿಚಾರವನ್ನು ವಿಮರ್ಶೆ ಮಾಡಿ. ನಾವು ಶ್ರೀಮಾನ್ ಹನುಮಂತಪ್ಪನವರನ್ನು ಇಲ್ಲಿಗೆ ಕರೆದುಕೊಂಡು ಬಂದದ್ದಾಯಿತು. ಅವರು ಇಲ್ಲಿಗೆ ಕಾರ್ಯದರ್ಶಿಗಳಾದ ಕೆಲವೇ ಕಾಲದಲ್ಲಿ. ಅವರ ಪ್ರಭಾವ ಏನಿದೆ ಎನ್ನುವುದನ್ನು ಅವರ ಕಾರ್ಯದಿಂದ ವ್ಯಕ್ತಪಡಿಸುತ್ತಾ ಬಂದರು. ಹಿಂದೆ ಇದ್ದ ಸಭಾಧ್ಯಕ್ಷರುಗಳೂ ಕೂಡ, ಇವರ ಕಾರ್ಯವನ್ನು ತುಂಬ ಮೆಚ್ಚಿಕೊಂಡಿದ್ದರು, ಎಲ್ಲ ಭಾಗದ ಶಾಸನ ಸಭಾ ಸದಸ್ಯರೂ ಕೂಡ ಅವರ ಬಗ್ಗೆ ಒಂದೇ ಮಟ್ಟದ ಗೌರವವನ್ನೂ ಅವರ ದಕ್ಷತೆಯ ಬಗ್ಗೆ ವಿಶ್ವಾಸವನ್ನೂ ಮತ್ತು ಅವರ ಅನುಭವದ ಬಗ್ಗೆ ಮೆಚ್ಚುಗೆಯನ್ನೂ ವ್ಯಕ್ತಪಡಿಸುತ್ತಾ ಬಂದರು. ಇವರು ನಿವೃತ್ತರಾಗುವ ಸಂದರ್ಭ ಬಂದಾಗ, ಅವರ ಸ್ಥಾನಕ್ಕೆ ಯಾರನ್ನು ತುಂಬಬೇಕು ಎನ್ನುವ ಸಮಸ್ಯೆ ಮತ್ತೆ ಸರ್ಕಾರಕ್ಕೆ ಉದ್ಭವಿಸಿತು. ಈ ಸಮಸ್ಯೆಗೆ ಉತ್ತರ ದೊರೆಯದಿದ್ದಾಗಲೆಲ್ಲ, ಶ್ರೀಮಾನ್ ಹನುಮಂತಪ್ಪನವರನ್ನು ಬಿಟ್ಟರೆ ಸದ್ಯದಲ್ಲಿ ಯಾರೂ ದೊರಕುವುದಿಲ್ಲ ಎಂದು ತಿಳಿದು, ಸರ್ಕಾರ ಅವರ ಸೇವೆಯನ್ನು ಒಂದಲ್ಲ, ಎರಡಲ್ಲ ನಾಲ್ಕು ವರ್ಷಗಳವರೆಗೆ ಮುಂದುವರಿಸಿ, ಅವರಿಂದ ಕೆಲಸ ತೆಗೆದುಕೊಂಡು ಬಂದಿದ್ದಾರೆ. ಇತ್ತೀಚೆಗೆ ಅನೇಕ ಸಂದರ್ಭದಲ್ಲಿ ಅವರನ್ನು ಮುಂದುವರಿಸಿಕೊಂಡು ಬಂದೆವು, ಬಹುಶಃ ಇನ್ನು ಮುಂದುವರಿಸುವ ಉದ್ದೇಶ ಇತ್ತೋ ಏನೋ, ಅವರೂ ಕೂಡ ನಾನು ಬಹಳ ಕಾಲ ಕೆಲಸ ಮಾಡಿದ್ದೇನೆ. ನಾನು ಹೆಚ್ಚು ಕಾಲ ಇರತಕ್ಕಂಥಾದ್ದು ಸೂಕ್ತವಲ್ಲ ಎನ್ನುವ ಅಭಿಪ್ರಾಯಕ್ಕೆ ಬಂದರು. ಅನಿವಾರ್ಯವಾಗಿ ಆ ಸ್ಥಾನಕ್ಕೆ ಬೇರೆಯವರನ್ನು ಹುಡುಕಲೇ ಬೇಕಾಗಿ ಬಂತು. ಆದರೂ ಅವರು ಇದ್ದ ಕಾಲದಲ್ಲಯೇ ಮುಂದೆ ಬರತಕ್ಕವರು ಅನುಭವ ಪಡೆದು ಅದರ ಫಲ ದೊರಕಬೇಕೆಂದು ಯೋಚನೆ ಮಾಡಿ ಮತ್ತೆ ಒಂದು ವರ್ಷ ಮುಂದುವರಿಸಿ ಅವರ ಕೆಲಸ ಮುಂದುವರಿಸಿಕೊಂಡು ಬಂದೆವು. ಈಗ ಅವರು ನಿವೃತ್ತರಾಗುವವರು ಇದ್ದಾರೆ, ಇವರ ಅವಧಿಯಲ್ಲಿ ಅನೇಕ ರೀತಿಯ ಬಿರುಗಾಳಿಗಳು ನಮ್ಮ ಸಭೆಯಲ್ಲಿ ಆಗಿಂದಾಗ್ಗೆ ಬರುತ್ತಿದ್ದವು. ಅಂಥ ಸಂದರ್ಭಗಳಲ್ಲಿ ನಾವೆಲ್ಲಾ ಅನುಭವದಿಂದ ನೋಡಿದ್ದೇವೆ, ಶ್ರೀಮಾನ್ ಹನುಮಂತಪ್ಪನವರು ಯಾವ ಕಾಲದಲ್ಲೂ ತಮ್ಮ ಮನಸ್ಸಿನ ಸಮಾಧಾನವನ್ನು ಹಾಗೂ ನೆಮ್ಮದಿಯನ್ನು ಕಳೆದುಕೊಂಡವರಲ್ಲ. ಈ ಕ್ವಾನಿಮಿಟಿಯನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಬೆಳೆಸಿಕೊಂಡಿದ್ದಾರೆ, ಅವರಲ್ಲಿ ಪೇಸೆನ್ಸ್ ಆಫ್ ಮೈಂಡ್ ಗಳಿಸಿಕೊಂಡಿದಾರೆ. ಸಮಯಕ್ಕೆ ತಕ್ಕ ರೀತಿಯಲ್ಲಿ ಯಾವುದಾದರೂ ಸಮಸ್ಯೆಗಳು ಬಂದಾಗ ಅದನ್ನು ಪರಿಹರಿಸುವ ಮಾರ್ಗವನ್ನು ತಮ್ಮ ಅನುಭವದ ಆಧಾರದಮೇಲೆ ಹಾಗೂ ಪಾರ್ಲಿಮೆಂಟರಿ ಪ್ರೊಸೀಜರ್ಸ್ ಎಲ್ಲೆಲ್ಲಿ ಯಾವ ಯಾವ ರೀತಿ ನಡೆದಿದೆ ಎಂಬುದನ್ನು ಹುಡುಕಿ, ತಾವೇ ಮನನ ಮಾಡಿಕೊಂಡು ಈ ರೀತಿ ಮಾಡುವುದು ಸೂಕ್ತ ಎಂದು ಹೇಳಿ ಉತ್ತಮ ಸಲಹೆಗಳನ್ನು ಎಲ್ಲಾ ಕಾಲದಲ್ಲಿಯೂ ಕೊಟ್ಟುಕೊಂಡು ಬಂದಿದ್ದಾರೆ. ಇಂಥ ಸಂದರ್ಭದಲ್ಲಿ ಸ್ವೋಟಕವಾಗುವ ಸನ್ನಿವೇಶದಲ್ಲಿ ತಮ್ಮ ಮನಸ್ಸಿನ ಭದ್ರತೆಯನ್ನು ಕಳೆದುಕೊಳ್ಳದೆ ಸಮಾಧಾನಕವಾಗಿ ಸಲಹೆ ಕೊಟ್ಟು. ಮತ್ತೆ ಎಲ್ಲರೂ ಶಾಂತಿಯಿಂದ ಕೆಲಸ ಮಾಡುವಂತಹ ಅವಕಾಶವನ್ನು ಮಾಡಿಕೊಡುತ್ತಾ ಬಂದಿದ್ದಾರೆ. ಅದೇರೀತಿ ನಮ್ಮ ಅನೇಕ ಅನುಭವದಲ್ಲಿ ಕೆಲವು ಕಠಿಣವಾದ ವಿಷಯಗಳ ಬಗ್ಗೆ ಅಂದರೆ ರೂಲಿಂಗ್ ಮತ್ತೊಂದು ಕೊಡುವಂತಹ ಸಂದರ್ಭದಲ್ಲಿ ಸಲಹೆ ಮತ್ತು ಸಹಕಾರ ಕೊಡುತ್ತಿದ್ದ ಬಗ್ಗೆ ನಾನು ಒತ್ತಿ ಹೇಳಬೇಕಾಗಿಲ್ಲ. ಅದು ಮಾನ್ಯ ಸದಸ್ಯರೆಲ್ಲರಿಗೂ ಅನುಭವದಿಂದ ಗೊತ್ತಿರತಕ್ಕ ವಿಚಾರ. ಇದೆಲ್ಲಕ್ಕಿಂತ ಹೆಚ್ಚಾಗಿ ಲೆಜಿಸ್ಲೇಚರ್ ಸೆಕ್ರೆಟರಿಯಾಗುವವರು ಯಾರೇ ಆಗಿರಲಿ ಅವರ ಬಗ್ಗೆ ನಮ್ಮ ಟ್ರಸರಿಬೆಂಚಸ್ ಅಷ್ಟೇ ಅಲ್ಲ ವಿರೋಧಪಕ್ಷದ ನಾಯಕರಾಗಲೀ, ಸದಸ್ಯರಾಗಲೀ, ವಿರೋಧಪಕ್ಷದವರು ಕೂಡ ನಾವು ಯಾವ ರೀತಿಯಿಂದ ಗೌರವಿಂದ ಕಾಣುತ್ತಿದ್ದೇವೋ, ಯಾವ ಒಂದು ಅವರ ದಕ್ಷತೆ ಮತ್ತು ಅನುಭವದ ಬಗ್ಗೆ ಮೆಚ್ಚಿಗೆ ವ್ಯಕ್ತಪಡಿಸುತ್ತಿದ್ದೆವೋ, ಅದೇ ಮಟ್ಟದಲ್ಲಿ ಅವರ ಬಗ್ಗೆ ಗೌರವ ಮತ್ತು ಮೆಚ್ಚಿಗೆಯನ್ನು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ವ್ಯಕ ಪಡಿಸಿಕೊಂಡು ಬಂದಿದ್ದಾರೆ. ಇದರ ಅರ್ಥ ಏನು ಎಂದರೆ, ಅವರು ಯಾವ ರೀತಿಯಲ್ಲೂ ಪಕ್ಷಪಾತ ದೃಷ್ಟಿಯಿಂದ ಯಾವುದೇ ಸಮಸ್ಯೆಯನ್ನು ನೋಡಿದವರಲ್ಲ ಎಂಬುದನ್ನು ನನ್ನ ಸ್ವಂತ ಅನುಭವದಿಂದ ತಿಳಿದಿದ್ದೇನೆ. ನಾನು ಅನೇಕ ಸಂದರ್ಭದಲ್ಲಿ ಅವರನ್ನು ಗಮನಿಸುತ್ತಿದ್ದೆನು, ಅವರು ಏನು ಸಲಹೆ ಕೊಟ್ಟರೂ ಉಭಯಪಕ್ಷಕ್ಕೂ ಅನುಕೂಲವಾಗುವ ರೀತಿಯಲ್ಲಿ ಕೊಡುತ್ತಿದ್ದರು. ವಿರೋಧಪಕ್ಷದವರಿಗೆ ಸಂದರ್ಭಾನುಸಾರ ಹೇಳಿದರೆ ಸಾಕು ಎಂದು ಕೆಲಸ ಮಾಡಿದವರಲ್ಲ. ಆಳುವ ಪಕ್ಷದ ತಪ್ಪು ಅಥವಾ

ಸರಿ ಇರಬಹುದು, ವಿರೋಧ ಪಕ್ಷದ ತಪ್ಪು ಆಥವಾ ಸರಿ ಇರಬಹುದು, ಮೃದುವಾಗಿ ಹೇಳಿದರೂ ಧೈರ್ಯವಾಗಿ ಈ ರೀತಿ ಮಾಡುವುದು ಸೂಕ್ತ ಎಂದು ತಮ್ಮ ಮನಬಿಚ್ಚಿ ಹೇಳುತ್ತಿದ್ದರು ನೋಡುವವರಿಗೆ ಶ್ರೀಮಾನ್ ಹನುಮಂತಪ್ಪನವರು ಜೋರಾಗಿ ಮಾತನಾಡುವ ವ್ಯಕ್ತಿ ಅಲ್ಲ, ಮೃದುವಾಗಿ ಮಾತನಾಡುವ ವ್ಯಕ್ತಿ ಎಂದು ಮೊದಮೊದಲು ಅನುಮಾನ ಬಂದರೂ ಅನುಭವದಲ್ಲಿ ಮೃದು ಸ್ವಭಾವದ ವ್ಯಕ್ತಿ ಆದರೂ ಧೃಢವಾಗಿ ಹೇಳಬಲ್ಲ ವ್ಯಕ್ತಿ ಎಂದು ಗೊತ್ತಾಗಿದೆ, ಉಭಯ ಸದನದ ಅಧ್ಯಕ್ಷರ, ಸರ್ಕಾರದಲ್ಲಿ ಎಲ್ಲರ ಮನಸ್ಸನ್ನು ಗೆದ್ದು ಎಲ್ಲರ ಪ್ರೀತಿಯನ್ನು ಗಳಿಸಿಕೊಂಡಂತಹ ವ್ಯಕ್ತಿ ಈ ಸಂದರ್ಭದಲ್ಲಿ ನಿವೃತ್ತಿಯಾಗುತ್ತಿದ್ದಾರೆ, ಒಂದಲ್ಲ ಒಂದು ದಿವಸ ನಿವೃತ್ತಿಯಾಗಬೇಕಾಗಿದೆ. ಕೆಲವರನ್ನು ನಿವೃತ್ತಿಯಾದರೆ ಸಾಕು ಎಂದು ಹೇಳುವ ಸಂದರ್ಭ ಉಂಟು. ಹನುಮಂತಪ್ಪನವರ ವಿಚಾರದಲ್ಲಿ ಹೇಳುವುದಾದರೆ ಅವರನ್ನೇ ಇನ್ನೂ ಕೆಲವು ದಿವಸ ಇಟ್ಟಿದ್ದರೆ ಇನ್ನೂ ಸಹಾಯವಾಗುತ್ತಿತ್ತು ಎನ್ನುವ ಭಾವನೆ ನಮಗೆ ಬರುತ್ತದೆ. ಆ ರೀತಿ ಕೆಲಸ ಮಾಡಿ ಹೆಸರು ಪಡೆಯುವುದು ಬಹಳ ದೊಡ್ಡ ವಿಚಾರ. ಎಲ್ಲರ ಪ್ರೀತಿ ಗೌರವಗಳಿಗೆ ಪಾತ್ರರಾಗಿ, ಕೆಲಸದಿಂದ ಅವರು ನಿವೃತ್ತಿಯಾಗುತ್ತಿದ್ದಾರೆ. ನಾವೆಲ್ಲರೂ ಅವರ ಕೆಲಸವನ್ನು ಮೆಚ್ಚಿ, ಅವರಿಗೆ ಶುಭ ವನ್ನು ಕೋರಬೇಕೆಂಬುದೇ ನಮ್ಮ ಅಭಿಲಾಷೆ, ಪರಮಾತ್ಮ ಅವರ ಆರೋಗ್ಯವನ್ನು ಹೆಚ್ಚಿಸಿ ಇನ್ನೂ ವಿವಿಧರೀತಿಯಲ್ಲಿ ನಮ್ಮ ದೇಶಕ್ಕೆ ಅವರ ಸೇವೆ ದೊರಕಲಿ ಎಂದು ಆಶಿಸಿ, ಅವರಿಗೆ ಮತ್ತೊಮ್ಮೆ ಶುಭ ವನ್ನು ನಮ್ಮ ಸದನದ ಪರವಾಗಿ, ಹಾಗೂ ಎಲ್ಲರ ಪರವಾಗಿ ಕೋರುತ್ತೇನೆ

† ಶ್ರೀ ಟಿ. ಆರ್. ಶಾಮಣ್ಣ (ಕೋಚ್).—ನನ್ಮಾನ ಅಧ್ಯಕ್ಷರೇ, ಈಗ ಸಭಾ ನಾಯಕರೂ ಹಾಗೂ ಮುಖ್ಯಮಂತ್ರಿಗಳು ಹೇಳಿರತಕ್ಕ ನಮ್ಮ ವಿಧಾನಮಂಡಲದ ಕಾರ್ಯದರ್ಶಿಗಳಾದ ಹನುಮಂತಪ್ಪನವರ ಬಗ್ಗೆ ಆಡಿರತಕ್ಕ ಮೆಚ್ಚಿಗೆ ಮಾತುಗಳ ಬಗ್ಗೆ ನನ್ನ ಬೆಂಬಲವನ್ನು ಸೂಚಿಸಿ ಒಂದೆರಡು ಮಾತುಗಳನ್ನು ತಮ್ಮ ಅಪ್ಪಣೆ ಪಡೆದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಾಧಾರಣವಾಗಿ ಲೆಜಿಸ್‌ಲೇಚರ್ ಬಿಸಿನೆಸ್ ಏನು ಇದೆ, ಅದು ಬಹಳ ಕಷ್ಟಕರವಾದ ಕೆಲಸ, ಅದು ಅಷ್ಟು ಸುಲಭಸಾಧ್ಯವಾದ ಕೆಲಸವಲ್ಲ. ಮುಖ್ಯ ಮಂತ್ರಿಗಳು ತಿಳಿಸಿರುವ ಹಾಗೆ ಶ್ರೀಮಾನ್ ಹನುಮಂತಪ್ಪನವರು ಪಕ್ಷರಹಿತವಾಗಿ ಪಾರ್ಲಿಮೆಂಟರಿ ಡೆಮಾಕ್ರಸಿ ಏನು ಇದೆಯೋ ಅದಕ್ಕೆ ಅನುಗುಣವಾಗಿ ಕೆಲಸ ಮಾಡಿಕೊಂಡುಬಂದಿರತಕ್ಕ ಒಬ್ಬ ಹಿರಿಯ ವ್ಯಕ್ತಿ ಎಂದು ಹೇಳಿದರೆ ತಪ್ಪಾಗಲಾರದು. ನೆರೆ ರಾಜ್ಯದಲ್ಲಿಯೂ ಕೆಲಸ ಮಾಡಿ ನಮ್ಮ ಕರ್ನಾಟಕ ರಾಜ್ಯದಲ್ಲಿಯೂ ಕೂಡ ಅನೇಕ ವರ್ಷಗಳಿಂದ ಕಾರ್ಯದರ್ಶಿಗಳಾಗಿ ಹೆಚ್ಚಿನ ಸೇವೆ ಸಲ್ಲಿಸಿದ್ದಾರೆ. ಮುಖ್ಯವಾಗಿ ಇವರ ಕಾಲದಲ್ಲಿ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಸಂಸ್ಥೆಗಳ ಬಗ್ಗೆ ಬಹಳ ಆಸಕ್ತಿ ವಹಿಸಿ, ವಿದೇಶಗಳಲ್ಲಿಯೂ ಕೂಡ ಪ್ರವಾಸ ಮಾಡಿ, ಅನೇಕ ಸಂದರ್ಭಗಳಲ್ಲಿ ನಮಗೆ ಪಾರ್ಲಿಮೆಂಟರಿ ಡೆಮಾಕ್ರಸಿ ಯಾವ ರೀತಿ ಕೆಲಸ ಮಾಡಬೇಕೆನ್ನುವುದರ ಬಗ್ಗೆ ಒಂದು ಸಂಸ್ಥೆ ಕಟ್ಟಿ ; ಅನೇಕ ಸಂದರ್ಭಗಳಲ್ಲಿ ಸೆಮಿನಾರ್‌ಗಳನ್ನು ಏರ್ಪಾಡು ಮಾಡಿ ಅನೇಕ ತಿಳುವಳಿಕೆಗಳನ್ನು ಹಾಗೂ ಸಹಾಯವನ್ನು ಪಾರ್ಲಿಮೆಂಟರಿ ವಿಚಾರದಲ್ಲಿ ಕೊಡುವ ಮುಖೇನ ಸಹಾಯಕರಾಗಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ನಾವುಗಳು ಮೋಟೀನುಗಳನ್ನು ಮತ್ತು ಅಮೆಂಡ್‌ಮೆಂಟ್‌ಗಳನ್ನು ಹೆಚ್ಚು ಹೆಚ್ಚಾಗಿ ಕೊಡತಕ್ಕ ಸಂದರ್ಭದಲ್ಲಿ; ಇದನ್ನು ಏತಕ್ಕೆ ಕೊಡುತ್ತೀರಿ; ನಿಮ್ಮ ಕೆಲಸ ಸರಿಯಾಗಿ ಆಗಬೇಕಾದರೆ ಈ ರೀತಿ ಮಾಡಿ ಎಂದು ತಮ್ಮ ಅನುಭವದ ಮಾತುಗಳನ್ನು ಹಾಗೂ ಸಲಹೆಗಳನ್ನು ಕೊಟ್ಟು ಸಹಾಯಕರಾಗಿದ್ದಾರೆ. ಇದರ ಜೊತೆಗೆ ಇವರಿಗೆ ಇದ್ದ ಸಹನೆ ಮೆಚ್ಚುವಂಥಾದ್ದು; ಇಂಥ ಸಹನೆ ಎಲ್ಲರಲ್ಲಿಯೂ ಇರುವುದಿಲ್ಲ, ಅಪರೂಪವಾಗಿ ಇರತಕ್ಕುದ್ದು, ಇವರು ಲೆಜಿಸ್‌ಲೇಚರ್ ಸೆಕ್ರೆಟರಿಯೇಟಿನ ಚೀಫ್ ಎಕ್ಸಿಕ್ಯೂಟೀವ್ ಹೆಡ್.

10-30 ಎ. ಎಂ.

ಒಂದು ಕಡೆ ಲೆಜಿಸ್‌ಲೇಚರ್‌ನ್ನು ಯಾವರೀತಿಯಲ್ಲೂ ಮನಸ್ಸು ನೋಯಿಸದಂತೆ ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ನಡೆಸಿಕೊಂಡು ಹೋಗುತ್ತಿದ್ದರು, ಮತ್ತೊಂದು ಕಡೆ ಅವರ ಕೈಕೆಳಗೆ ಇರತಕ್ಕ ಅಧಿಕಾರಿಗಳನ್ನು, ಕೆಲಸಗಾರರನ್ನು ನ್ಯಾಯವಾದ ರೀತಿಯಲ್ಲಿ ನೋಡಿಕೊಳ್ಳುತ್ತಿದ್ದರು, ನಾನು ಕಂಡ ಹಾಗೆ ಹನುಮಂತಪ್ಪನವರು ದಕ್ಷ ಅಧಿಕಾರಿಯಲ್ಲ ಅವರು ನ್ಯಾಯವಾಗಿ ಕೆಲಸ ಗಾರರ ಬಗ್ಗೆ ನಡೆದುಕೊಳ್ಳುತ್ತಿಲ್ಲ ಎನ್ನುವುದನ್ನು ನಾನು ಗಾಳಿ ಶಬ್ದದಿಂದಲೂ ಕೇಳಿಲ್ಲ. ಈ ವಯಸ್ಸಿನಲ್ಲಿ ಅನೇಕರಿಗೆ ಅಧಿಕಾರ ಸ್ಥಾನ ಬಂದರೆ ವ್ಯಾಸಂಗ ಮಾಡಬೇಕು ಎನ್ನುವ ಬಗ್ಗೆ ಸಾತಿಷ್ಯ ಮನೋಭಾವ ಇರುವುದಿಲ್ಲ. ನಾನು ಮಾನ್ಯ ಹನುಮಂತಪ್ಪನವರನ್ನು ಅನೇಕ ಸಾರಿ

ನೋಡಿದ್ದೇನೆ. ಅವರು ರಿಜಿಸ್ಟ್ರೇಚರ್ ಕೆಲಸ ಪ್ರಾರಂಭವಾದರೆ, ಆ ದಿವಸದ ಕಾರ್ಯಕ್ರಮ, ತೀರ್ಮಾನವಾದರೆ ಅವರು ಅಸೆಂಬ್ಲಿಯಲ್ಲಿ ಕುಳಿತುಕೊಳ್ಳಬೇಕು ಮತ್ತ ಕಾನ್ಸಿರ್‌ಗೆ ಹೋಗಬೇಕು, ಇಲ್ಲದೇ ಹೋದರೆ ರೀಡಿಂಗ್ ರೂಮ್‌ನಲ್ಲಿ ರೆಫರೆನ್ಸ್ ನೋಡತಕ್ಕದ್ದು, ಈ ರೀತಿ ಮಾಡಿಕೊಂಡು ಸಾಕಷ್ಟು ವ್ಯಾಸಂಗ ಮಾಡಿ ಅಪೆಟು ಡೇಟ್ ವಿಷಯಗಳನ್ನು ತಿಳಿದುಕೊಂಡು ಅವರ ಕೆಲಸ ಮಾಡಿ ಕೊಂಡು ಬಂದಿದ್ದಾರೆ. ಅವರು ಪಹ್ವದಯರು, ಜ್ಞಾನವನ್ನು ಹೆಚ್ಚಿನ ರೀತಿಯಲ್ಲಿ ಸಂಪಾದನೆ ಮಾಡಿಕೊಂಡು ಬಂದಿರುವವರು. ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಅವರು ಅಪ್ರೋಸಿಷನ್ ನವರಿಗೂ ಕೊಡ ಸಾಕಷ್ಟು ಕಾರಣ ಕೊಟ್ಟು, ತಪ್ಪು ದಾರಿಯಲ್ಲಿ ಹೋಗುತ್ತಿದ್ದರೆ, ಈ ರೀತಿ ಹೋಗುವುದು ಸರಿಯಲ್ಲ, ನಿಮ್ಮ ಕೆಲಸ ಆಗಬೇಕಾದರೆ ಈ ರೀತಿ ಮಾಡಬೇಕು ಎಂದು ಹೇಳುತ್ತಿದ್ದರು. ಹಾಗೆ ಅನೇಕ ಸಂದರ್ಭಗಳಲ್ಲಿ ಸರ್ಕಾರದವರಿಗೂ ಕೂಡ ಈರೀತಿ ಮಾಡಿದರೆತೊಡಕು ಬರುತ್ತದೆ ಎಂದು ಹೇಳಿದ್ದನ್ನು ಕೇಳಿದ್ದೇನೆ ಇಷ್ಟೆ ಅಲ್ಲದೇ ಸ್ಪೀಕರ್ ಸ್ಥಾನದಲ್ಲಿದಂಥ ಅಧ್ಯಕ್ಷರಿಗೂ ಕಾನ್ಸಿರ್ ಸ್ಥಾನದಲ್ಲಿರತಕ್ಕ ಅಧ್ಯಕ್ಷರಿಗೂ ಬೆಂಬಲವಾಗಿ ಬಲಗೈ ಇದ್ದಂತೆ ಇದ್ದರು ಹೀಗೆ ಅವರು ತಮ್ಮ ಅಪರಿಮಿತವಾದ ಸೇವೆಯನ್ನು ಸಲ್ಲಿಸಿ ನಮ್ಮ ಮೆಚ್ಚುಗೆಯನ್ನು ಪಡೆದಿದ್ದಾರೆ. ಅವರಿಗೆ ಭಗವಂತನು ಇನ್ನು ಹೆಚ್ಚು ಆರೋಗ್ಯ ಭಾಗ್ಯವನ್ನು ಕೊಡಲಿ ಎಂದು ಹಾರೈಸುತ್ತೇನೆ ಅಲ್ಲದೇ ಅವರು ಬೆಂಗಳೂರಿನಲ್ಲೇ ಮನೆಯನ್ನು ಮಾಡಿಕೊಂಡಿರುವುದರಿಂದ ಯಾವ ಒಂದು ಸಂದರ್ಭ ಬಂದರೂ ಪಾರ್ಲಮೆಂಟ್ ವಿಚಾರವಾಗಿ ನಾವು ತಿಳಿದುಕೊಳ್ಳಬಹುದು ಎಂಬ ನಂಬಿಕೆ ನಮಗೆ ಇದೆ. ಈಗ ಅವರ ಸ್ಥಾನದಲ್ಲಿ ಬಂದಿರತಕ್ಕ ಮಾನ್ಯ ವೆಂಕಟಸ್ವಾಮಿಯವರನ್ನು ನ್ಯಾಯಾಂಗ ಇರಾಖೆಯಿಂದ ತೆಗೆದುಕೊಂಡಿದ್ದಾರೆ, ಅವರಿಗೂ ಸಾಕಷ್ಟು ಅನುಭವ ಇದೆ ಈಗ ಹೆಚ್ಚಿನ ವಿಚಾರಗಳನ್ನು ಸಾಕಷ್ಟು ಗ್ರಹಿಸಲಿಕ್ಕೆ ಪ್ರಾರಂಭ ಮಾಡಿದ್ದಾರೆ. ಅವರು ಸಹ ಉತ್ತಮ ಉತ್ತರಾಧಿಕಾರಿ ಆಗುತ್ತಾರೆ ಎಂದು ನನಗೆ ನಂಬಿಕೆ ಇದೆ. ಇನ್ನು ಮಾನ್ಯ ಹನುಮಂತಪ್ಪನವರು ತಮ್ಮ ಕೈಕೆಳಗಿರತಕ್ಕ ಅಂಡರ್ ಸೆಕ್ರೆಟರಿಗಳಿಗೆ, ಹಾಗೂ ಡೆಪ್ಯುಟಿ ಸೆಕ್ರೆಟರಿಯವರಿಗೆ ಸಾಕಷ್ಟು ಉತ್ತೇಜನ ಕೊಟ್ಟು ಅವರು ಒಬ್ಬೊಬ್ಬರು ಇಂಡಿಪೆಂಡೆಂಟ್ ಆಗಿ ಕೆಲಸ ಮಾಡುವುದಕ್ಕೆ ಸಹಾಯ ಮಾಡಿಕೊಟ್ಟಿದ್ದಾರೆ. ಆದ್ದರಿಂದ ನಾನು ಹೆಚ್ಚು ಮಾತನಾಡಬೇಕಾಗಿಲ್ಲ, ಅವರಿಗೆ ನಾವು ನಮ್ಮೆಲ್ಲರ ವಿಶ್ವಾಸವನ್ನು ಸೂಚಿಸಿ ಭಗವಂತನು ಅವರಿಗೆ ಇನ್ನು ಹೆಚ್ಚಿನ ಆರೋಗ್ಯವನ್ನು ಕೊಟ್ಟು ರಾಷ್ಟ್ರದ ಸೇವೆಯನ್ನು ಮಾಡಲಿಕ್ಕೆ ಅವಕಾಶ ಮಾಡಿಕೊಡಲಿ ಎಂದು ಹೇಳಿ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಮುಖ್ಯ ಮಂತ್ರಿಗಳು, ಶ್ರೀಪಾನ್ ಹನುಮಂತಪ್ಪನವರ ಬಗ್ಗೆ ಹೇಳಿದ ಎಲ್ಲಾ ಅಂಶಗಳನ್ನು ನಾನಾದರು ಪುಷ್ಟೀಕರಿಸಿ ನಾನು ತುಂಬು ಹೃದಯದಿಂದ ನಮ್ಮ ಅಭಿಮಾನವನ್ನು ಅವರು ನಿವೃತ್ತರಾಗತಕ್ಕ ಕಾಲದಲ್ಲಿ ತಿಳಿಸಲಿಕ್ಕೆ ಇಷ್ಟಪಡುತ್ತೇನೆ. ನಾವು ಅವರು ವಿಧಾನಮಂಡಲ ಪ್ರವೇಶ ಮಾಡಿದ ಅವಧಿಯಲ್ಲಿ ಕಂಡಂತಾದ್ದು, ಅವರ ಪೂರ್ಣ ಅನುಭವ, ಮತ್ತು ಅವರ ಮೃದು ಹೃದಯ ಹಾಗೂ ಅವರು ಸಂಸದೀಯ ಬಗ್ಗೆ ಸಂಪಾದನೆ ಮಾಡಿರತಕ್ಕಂತಹ ಜ್ಞಾನಭಂಡಾರ ಬಹಳ ಮುಖ್ಯವಾಗಿ ಕಂಡಂತಹ ಅಂಶಗಳು. ಅವರು ನಿವೃತರಾಗತಕ್ಕಂತಹ ಸಂದರ್ಭದಲ್ಲಿ ಖಂಡಿತ ಅವರು ನಿವೃತ್ತರಾಗುವುದಿಲ್ಲ ಎನ್ನುವ ಭರವಸೆ ಇತ್ತು. ಆದರೆ ಅವರು ನಿವೃತ್ತರಾಗುವುದು ನಮಗೆ ವ್ಯಸನವನ್ನುಂಟುಮಾಡಿದೆ. ಕಾರಣ ಅವರು ಸಾಕಷ್ಟು ಅನುಭವ ಪಡೆದಿದ್ದರು, ಅವರು ಶಾಸನ ಕಾಂಗಕ್ಕೆ ಪ್ರವೇಶ ಮಾಡಿದ ಮೇಲೆ ಕೆಲವು ಸಂದರ್ಭಗಳಲ್ಲಿ ಮಹತ್ವಪೂರ್ಣವಾದಂತಹ ಕೆಲವು ಮಾಹಿತಿಗಳನ್ನು ಕೊಟ್ಟು ನಮ್ಮ ಕೆಲಸ ಯಶಸ್ವಿಯಾಗಲಿಕ್ಕೆ ನಮಗೆ ಅನುಭವ ಕೊಟ್ಟಿದ್ದರ , ಅವರ ಈ ನಿವೃತ್ತ ಅವಧಿಯಲ್ಲಿ ನಾವು ಇನ್ನಷ್ಟು ಕಲಿಯತಕ್ಕದ್ದು ಇತ್ತು, ಆದರೆ ನಾವು ಸಾಕಷ್ಟು ತ್ರದ್ದೆವಹಿಸಿ ಕಲಿಯಲಿಲ್ಲವಲ್ಲ ಎಂದು, ನಮಗೆ ಸಿಕ್ಕಿದಂತಹ ಕಾಲವನ್ನು ಸರಿಯಾಗಿ ಸದುಪಯೋಗ ಪಡಿಸಿಕೊಳ್ಳಲಿಲ್ಲವಲ್ಲ ಎಂದು ವ್ಯಥೆಯಾಗುತ್ತಿದೆ. ಮಾನ್ಯ ಹನುಮಂತಪ್ಪನವರು ನಮ್ಮ ಮನಸ್ಸಿನಿಂದ ಯಾವೊತ್ತು ಅಳಿಸಿ ಹೋಗುವ ವ್ಯಕ್ತಿಯಲ್ಲ ಎಂದು ಸಂಪೂರ್ಣವಾಗಿ ಮನವರಿಕೆ ಮಾಡಿಕೊಂಡಿದ್ದೇವೆ. ಉತ್ತಮ ಭಾವನೆಯನ್ನು ಹೊಂದಿರತಕ್ಕ ವ್ಯಕ್ತಿಯನ್ನು ನಾವು ಇವೊತ್ತು ಕಳೆದುಕೊಳ್ಳುತ್ತಿದ್ದೇವೆ ಎಂದು ವ್ಯಸನವಾಗುತ್ತಿದೆ. ಕೆಲವೊಂದು ಸಾರಿ ನಾವು ಎಂತಹ ಉದ್ವೇಗದಲ್ಲಿದ್ದರು, ಅವರ ಒಳ್ಳೆಯ ಭಾಷೆಯಲ್ಲಿ ನಾವು ಹೇಗೆ ನಮ್ಮ ನಡೆತೆಗಳನ್ನು ತಿದ್ದಿಕೊಳ್ಳಬೇಕು

ಎನ್ನುವ ಬಗ್ಗೆ ಪರಿಪಕ್ವವಾಗಿ ತಿಳಿಸಿದ್ದಾರೆ, ಅವರಿಗೆ ನಾವು ತುಂಬಾ ಕೃತಜ್ಞರಾಗಿದ್ದೇವೆ, ಅವರು ಏನು ಅಪಾರವಾದಂತಹ ವಿಶ್ವಾಸವನ್ನು ಈ ಸದನದ ಎಲ್ಲಾ ಸದಸ್ಯರಿಂದ ಪಡೆದಿದ್ದಾರೆ, ಇದೇ ವಿಶ್ವಾಸ ಉತ್ತಮವಾಗಿ ಜೀವಂತ ಉಳಿಯಲಿ ಎಂದು ಹೇಳಿ, ಅವರು ಉತ್ತಮ ಜೀವನವನ್ನು ಇನ್ನು ಮುಂದೆ ಸಾಗಿಸಲಿ ಎಂದು ಹೇಳಿ, ಅವರ ಸೇವೆಯನ್ನು ಸಂಪೂರ್ಣ ಮೆಚ್ಚುಗೆಯಿಂದ ಶ್ಲಾಘಿಸಿ ಅವರಿಗೆ ಶುಭ ಹಾರೈಸಿ, ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

† ಶ್ರೀ ಹೆಚ್. ಟಿ. ಕೃಷ್ಣಪ್ಪ (ನಾಗಮಂಗಲ).—ಮಾನ್ಯ ಅಧ್ಯಕ್ಷರೇ, ಜ್ಞಾನದಲ್ಲಿ, ಸಂಸ್ಕೃತಿಯಲ್ಲಿ, ಸದ್ಭಾವನೆಗಳಲ್ಲಿ ಹೊಂದಿರುವವರಲ್ಲಿ ಹಿರಿಯರಾದಂತಹ ಮಾನ್ಯ ಹನುಮಂತಪ್ಪನವರ ಸೇವೆಯನ್ನು ಅವರ ನಿವೃತ್ತಿಯಿಂದ ಈ ದಿವಸ ನಾವು ಅನಿವಾರ್ಯವಾಗಿ ಕಳೆದುಕೊಳ್ಳುತ್ತಿದ್ದೆವೆ, ಅವರ ಮಾರ್ಗದರ್ಶನ ನಮಗೆ ಅತ್ಯವಶ್ಯಕವಾಗಿ ಇತ್ತು. ಅವರು ಹಿರಿಯರು, ಕಿರಿಯರು ಎನ್ನುವ ಬೇದಭಾವ ಇಲ್ಲದೆ, ಕಿರಿಯರಿಗೆ ಮಾರ್ಗದರ್ಶನ ಮಾಡುವುದರಲ್ಲಿ, ಮತ್ತು ಪದನದ ಕಾರ್ಯಕರಾಪಗಳನ್ನು ನಡೆಸುವುದರಲ್ಲಿ ನಮಗೆ ಒಂದು ಚೈತನ್ಯದ, ಮತ್ತು ತಿಳುವಳಿಯ ಸ್ಫೂರ್ತಿಯಾಗಿದ್ದರು. ಆ ಬಗ್ಗೆ ನಾವು ಎಷ್ಟು ಕೊಂಡಾಡಿದರು ಸಾಲದು. ನಿವೃತ್ತರಾಗತಕ್ಕ ಅಧಿಕಾರಿಗಳಿಗೆ ಇವರು ಒಬ್ಬ ಆದರ್ಶ ವ್ಯಕ್ತಿ ಎಂದು ಹೇಳಿದರೆ ಅದು ಉತ್ಪ್ರೇಕ್ಷೆಯ ಮಾತಲ್ಲ. ಈ ಒಂದು ಸದನದ ಕಾರ್ಯಕರಾಪಗಳನ್ನು ನಡೆಸಿಕೊಂಡು ಹೋಗುವುದು ಬಹಳ ಕಷ್ಟವಾದ ಕೆಲಸ. ಶ್ರೀಮಾನ್ ಹನುಮಂತಪ್ಪನವರು ಈ ಒಂದು ಪರೀಕ್ಷೆಯಲ್ಲಿ ಎಲ್ಲರಿಗಿಂತಲೂ ಮೊದಲನೇ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ ಅವರ ಜೀವನ ಉತ್ತಮವಾಗಿರಲಿ, ಸುಖಮಯವಾಗಿರಲಿ ಎಂದು ಭಗವಂತನನ್ನು ಪ್ರಾರ್ಥಿಸಿಕೊಂಡು, ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಎ. ಕಕ್ಕಿರಾಯ (ಬಂಟವಾಳ).—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಹನುಮಂತಪ್ಪನವರು ನನಗೆ 1952ರಲ್ಲಿ ಪರಿಚಯವಾಗಿದ್ದು, 1952ರಲ್ಲಿ ಮಾನ್ಯ ಹನುಮಂತಪ್ಪನವರು ಮದ್ರಾಸ್ ಅಸೆಂಬ್ಲಿಯಲ್ಲಿ ಕಾರ್ಯದರ್ಶಿಯಾಗಿದ್ದರು. ಈಗ ಇಲ್ಲಿ ನಾನು ಶಾಸನ ಸಭೆ ಸದಸ್ಯನಾಗಿ ನಾವು ರಿಜ್ಯೆರ್ ಆಗುವ ಕೆಲವು ದಿವಸಗಳ ಮುಂಚೆ ಅವರು ರಿಜ್ಯೆರ್ ಆಗುತ್ತಿದ್ದಾರೆ. ಇವರ ಕರ್ತವ್ಯಗಳನ್ನು ತಮಿಳುನಾಡಿನಲ್ಲಿ ಇರತಕ್ಕ ನಮ್ಮ ಕರ್ಯಾಣ ಸುಂದರಂ ಅವರು ಬಹಳವಾಗಿ ಹೇಳುತ್ತಾರೆ ಮಾನ್ಯ ಹನುಮಂತಪ್ಪನವರು ರಿಟ್ಯೆರ್ ಆಗುತ್ತಾರೆ ಎಂದು ಕೇಳಿದಾಗ ಅವರು ಮಾನ್ಯ ಹನುಮಂತಪ್ಪನವರ ವಿಶ್ರಾಂತಿ ಜೀವನಕ್ಕೆ ಶುಭಾಶಯವನ್ನು ಕೋರಿ ತಮಗೆ ತಿಳಿಸಬೇಕು ಎಂದು ಕೇಳಿಕೊಂಡಿದ್ದಾರೆ. ಈಗ ಕಳೆದ ನಾಲ್ಕೈದು ವರ್ಷದ ನನ್ನ ಅನುಭವದಿಂದ, ಮತ್ತು ಎಲ್ಲ ವಿರೋಧ ಪಕ್ಷದ ಸದಸ್ಯರ ಅನುಭವದಿಂದ ಹೇಳಬೇಕಾದರೆ ಒಂದು ಉತ್ತಮವಾದಂತಹ ಸಂಸದೀಯ ಪಂಪ್ರದಾಯವನ್ನು ರೂಢಿಸುವಂತಹ ಕಾರ್ಯದಲ್ಲಿ ಆದ್ಯ ಪ್ರವರ್ತಕರಾಗಿ ದುಡಿದಂಥವರಲ್ಲಿ ಮಾನ್ಯ ಹನುಮಂತಪ್ಪನವರು ಒಬ್ಬರು; ಅವರ ಒಂದು ಸಂಪ್ರದಾಯವನ್ನು ಮುಂದುವರಿಸಿಕೊಂಡು ಹೋಗತಕ್ಕ ಕಾರ್ಯದಲ್ಲಿ ನಾವೆಲ್ಲರೂ ಅವರ ಆದರ್ಶವನ್ನು ಕೆಗೆದುಕೊಂಡು ಮುಂದುವರೆಸುತ್ತೇವೆ ಎಂದು ಆಶ್ವಾಸನೆಯನ್ನು ಕೊಟ್ಟು, ಅವರ ವಿಶ್ರಾಂತಿ ಜೀವನದಲ್ಲಿ ದೇವರು ಅವರಿಗೆ ಎಲ್ಲಾ ಸುಖಗಳನ್ನು ಕೊಡಲಿ ಎಂದು ಹಾರೈಸಿ, ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† SRI B. B SAYANAK (Belgaum) — Madam Speaker, I support the resolution moved by the Cheif Minister. It is the proud privilege of the Maharashtra Ekikarn Samithi to speak about Sri Hanumanthappa, Legislature Secretary. After passing the Law degree, he set up his practice in Bellary and later joined the Military service After serving the Military for some time, he joined the Madras Legislature and from there he came over to Mysore State. He is a man with full of patience, a hard worker and he never showed temper. He has cooperated with the Members of the Opposition in

the same manner as he did with the members of the Ruling Party. A man has to retire at a certain age. He is a great man. I wish that God may give him good health and prosperity.

ಅಧ್ಯಕ್ಷರು.— ಮಾನ್ಯ ಮುಖ್ಯಮಂತ್ರಿಗಳ ಮತ್ತು ಮತ್ತು ವಿರೋಧ ಪಕ್ಷದ ನಾಯಕರ ಮತ್ತು ಮಾನ್ಯ ಸದಸ್ಯರುಗಳ ಧ್ವನಿಯೊಂದಿಗೆ ನನ್ನ ಧ್ವನಿಯನ್ನೂ ಕೂಡಿಸಿ, ನಮಗೆ ಸಹಾನರಾದುಂಥಾ ಹಾಗೂ ಇನ್ನು ಸ್ವಲ್ಪ ದಿವಸದಲ್ಲೇ ನಿವೃತ್ತರಾಗತಕ್ಕಂಥಾ ಶ್ರೀಮಾನ್ ಹನುಮಂತಪ್ಪನವರ ಬಗ್ಗೆ ನಾಲ್ಕು ಮಾತುಗಳನ್ನು ಹೇಳಲು ಇಷ್ಟಪಡುತ್ತೇವೆ.

ಶ್ರೀಮಾನ್ ಹನುಮಂತಪ್ಪನವರು ನನಗೆ ಬಹಳ ದಿವಸದಿಂದಲೂ ಗೊತ್ತು. ಅವರು ಎಷ್ಟು ಮೃದುವಾಗಿ ಮಾತನಾಡುತ್ತಾರೆ ಅಷ್ಟೇ ಮೃದುಸ್ವಭಾವದವರು. ಯಾರಾದರೂ ಹಟ ಮಾಡಿಕೊಂಡು ಹೋದರೆ ಅವರು ವೃದ್ಧ ಸ್ವಭಾವದವರಾದರೂ ಕೂಡ ಅವರ ಬಗ್ಗೆ ಯಾವ ರೀತಿಯಲ್ಲಿ ನಡೆಯಬೇಕು ಅನ್ನುವುದು ಅವರಿಗೆ ಗೊತ್ತಿತ್ತು. ನಿಜವಾಗಿಯೂ ಹೇಳುವುದಾದಲ್ಲಿ ಎಲ್ಲವೂ ಸರಿಯಾಗಿ ಎಲ್ಲ ಕೆಲಸ ಕಾರ್ಯಗಳೂ ಸರಿಯಾಗಿ ನಡೆಯಬೇಕು ಪಡೆಸಿಕೊಂಡು ಹೋಗಬೇಕು ಅನ್ನುವುದು ಅವರ ಉದ್ದೇಶವಾಗಿತ್ತು ಎಂದು ನನಗೆ ಕಟ್ಟಕಡೆಯಲ್ಲಿ ಅರ್ಥವಾಯಿತು. ಮುಖ್ಯಮಂತ್ರಿಗಳು ಹೇಳಿದ ಹಾಗೆ ಸ್ಪೋರ್ಟಿವ್ ಆಗಿ ಸಮಯಕ್ಕೆ ತಕ್ಕ ಹಾಗೆ, ಯಾರ್ಯಾರು ಯಾವ ಯಾವರೀತಿ ಹೇಳುತ್ತಾರೆ ಎಂಬುದನ್ನು ಯೋಜನೆ ಮಾಡಿ ಒಳ್ಳೆಯ ರೀತಿಯಲ್ಲಿ ಸಭೆಯ ಕಾರ್ಯಕಲಾಪಗಳನ್ನು ನಡೆಸುಕೊಂಡು ಹೋಗುತ್ತಿದ್ದರು. ಅವರ ವ್ಯಕ್ತಿತ್ವದಲ್ಲಿರತಕ್ಕಂಥಾ ಧೀರತ್ವ ಮತ್ತು ನಿರ್ದಾಕ್ಷಿಣ್ಯ ಇವುಗಳನ್ನು ನೋಡಿಕೊಂಡು ಎರಡು ಕಡೆಯೂ ಸಮಾಧಾನವಾಗುವಂತೆ ಮಾಡಿ, ಈ ಸಭೆಯ ಕಾರ್ಯಕಲಾಪಗಳನ್ನೂ ಕೂಡ ಒಳ್ಳೆಯ ರೀತಿಯಲ್ಲಿ ನಡೆಸಿಕೊಂಡು ಹೋಗುವಂತೆ ಮಾಡುತ್ತಿದ್ದರು. ನಮ್ಮ ನಿಮ್ಮ ಅನುಭವದಂತೆ ಈ ಕೆಲಸ ಸಾಧಾರಣವಾದ ಕೆಲಸವಲ್ಲ ಎಷ್ಟು ಜನರು ಇಲ್ಲಿ ಇರುತ್ತಾರೆ, ಎಷ್ಟು ತರಹ ಮನಸ್ಸುಗಳು ಇರುತ್ತವೆ ಎಷ್ಟು ಜನರು ಇರುತ್ತಾರೆ, ಎಷ್ಟು ವಿಧವಾದಂಥಾ ನಡವಳಿಕೆ ಮತ್ತು ಮನಸ್ಸುಗಳು ಇರುತ್ತವೆ ಅವನ್ನೆಲ್ಲಾ ಒಟ್ಟು ಗೂಡಿಸಿ ನ್ಯಾಯವಾದ ರೀತಿಯಲ್ಲಿ ಈ ಸಭೆಯನ್ನು ನಡೆಸಿಕೊಂಡು ಹೋಗುವುದಕ್ಕೆ ಪ್ರಯತ್ನ ಪಡತಕ್ಕಾಂಥಾದ್ದು ಅಷ್ಟು ಸುಲಭವಲ್ಲ. ಇಂಥಾ ಕೆಲಸವನ್ನು ಅವಳಿ ಹೆಚ್ಚಿನ ರೀತಿಯಲ್ಲಿ ಸಾಧನೆ ಮಾಡಿ ಇವರಲ್ಲಿ ಸಿದ್ಧಿ ಪಡೆದಿದ್ದಾರೆ ಎಂದು ನನ್ನ ನಂಬಿಕೆ. ಪ್ರತಿ ಯೊಬ್ಬ ಮನುಷ್ಯನಿಗೂ ಯಾವ ಕೆಲಸ ಮಾಡಿದರೆ ಜಾಬ್ ಸ್ಯಾಟಿಸ್‌ಫ್ಯಾಕ್ಷನ್ ಇರುತ್ತದೋ ಆ ಒಂದಂ ಜಾಬ್ ಸ್ಯಾಟಿಸ್‌ಫ್ಯಾಕ್ಷನ್ ಶ್ರೀಮಾನ್ ಹನುಮಂತಪ್ಪನವರು ಹೊಂದಿದ್ದರು ಎಂದೂ ನನ್ನ ಭಾವನೆ ಅವರ ಕೆಲಸದ ಅವಧಿಯಲ್ಲಿ ಅವರು ಲೆಜಿಸ್ಲೇಚರ್ ಸೆಕ್ರಟೇರಿಯೇಟಿಗ್ ಅನೇಕ ಅನುಕೂಲಗಳನ್ನು ಮತ್ತು ಅನೇಕ ಮುಖ್ಯವಾದ ಕೆಲಸಗಳನ್ನೂ ಕೂಡ ಮಾಡಿದ್ದಾರೆ. ಆದರೆ ಅವರಲ್ಲಿದ್ದ ಒಂದೇ ಎಂದೂ ಕೊರತೆ ಏನು ಎಂದರೆ ನಮ್ಮ ಈ ಲೈಬ್ರರಿಗೆ ಬೇಕಾದಷ್ಟು ಅನುಕೂಲತೆಗಳನ್ನ ಮಾಡಿಕೊಡಬೇಕು ಅನ್ನುವುದೂ ಎಂದು ನನಗೆ ಅನಿಸುತ್ತದೆ. ಈ ಲೈಬ್ರರಿಯನ್ನು ದೊಡ್ಡದನ್ನಾಗಿ ಮಾಡಿ ಓದುವವರಿಗೆ ಈ ಲೈಬ್ರರಿಯಲ್ಲಿ ಬೇಕಾದಂಥಾ ಸಾಕಷ್ಟು ಅನುಕೂಲತೆಗಳನ್ನು ಮಾಡಿಕೊಡಬೇಕು ಅನ್ನುವುದೂ ಅವರ ಮನಸ್ಸಿನಲ್ಲಿತ್ತು ಎಂದೂ ನನಗೆ ಅನಿಸುತ್ತದೆ. ಈ ಲೈಬ್ರರಿಯಲ್ಲಿ ಸಹಸ್ರಾರು ಪುಸ್ತಕಗಳು ಇವೆ. ಆದರೆ ಇವಕ್ಕೆ ಸಾಕಷ್ಟು ಜಾಗವಿಲ್ಲ. ಲೈಬ್ರರಿಯಲ್ಲಿ ಓದತಕ್ಕಂಥಾ ಸದಸ್ಯರುಗಳಿಗೆ ಒಳ್ಳೆಯ ತರಹ ಅನುಕೂಲ ಮಾಡಿಕೊಡಬೇಕು ಅನ್ನುವುದು ಅವರ ಮನಸ್ಸಿನಲ್ಲಿತ್ತು ಎಂದೂ ಕಾಣುತ್ತದೆ ಅವರೆ ಈ ಕೆಲಸವನ್ನು ಮುಂದಿನವರು ನಡೆಸಿಕೊಂಡು ಹೋಗುತ್ತಾರೆ ಎಂದು ನನಗೆ ಅನಿಸುತ್ತದೆ. ಪ್ರತಿಯೊಬ್ಬ ಮನುಷ್ಯನಿಗೂ ಕೂಡ ಒಂದು ಕೆಲಸ ಮಾಡಿದ ಮೇಲೆ ಅದಕ್ಕೆ ಒಂದು ಅಂತ್ಯ ಇರುತ್ತದೆ; ಅಂದರೆ ಅವನಿಗೆ ನಿವೃತ್ತಿ ಇರುತ್ತದೆ. ಹಾಗೆ ಅವರು ಈ ಕೆಲಸವನ್ನು ಬಹಳಷ್ಟು ಸುಗಮವಾಗಿ ನಡೆಸಿಕೊಂಡು ಬಂದು ಕೊನೆಯಲ್ಲಿ ಈ ಕೆಲಸದಿಂದ ನಿವೃತ್ತರಾಗುತ್ತಾರೆ. ಅವರ ನಿವೃತ್ತ ಜೀವನದ ಬಗ್ಗೆ ಎಲ್ಲರೂ ಹಾರೈಸಿದ ಹಾಗೆ ನಾನೂ ಕೂಡ ಅವರ ನಿವೃತ್ತಿ ಜೀವನ ಬಹಳ ಸಮಾಧಾನಕರವಾಗಿರಲಿ, ಅವರಿಗೆ ಎಲ್ಲಾ ಬಗೆಯ ಸನ್‌ಮಂಗಳವನ್ನೂ ಭಗವಂತ ಕೊಡಲಿ ಎಂದು ಆಶಿಸಿ ಈ ನಿರ್ಣಯಕ್ಕೆ ತಮ್ಮೆಲ್ಲರ ಒಪ್ಪಿಗೆ ಇದೆ ಎಂದು ನಾನಾದರೂ ಕೂಡ ಭಾವಿಸಿಕೊಂಡಿದ್ದೇನೆ. ಮತ್ತು ಈ ನಿರ್ಣಯವನ್ನು ಸರಿಯಾದ ರೀತಿಯಲ್ಲಿ ಮೌಂಟ್ ಹಾಕಿಸಿಕೊಡುವುದು ಒಂದು ಅಭ್ಯಾಸ ಇರುವುದರಿಂದ ಇದಕ್ಕೂ ಕೂಡ ತಮ್ಮೆಲ್ಲರ ಒಪ್ಪಿಗೆ ಇದೆ ಎಂದು ನಾನು ತಿಳಿದು ಕೊಂಡಿದ್ದೇನೆ.

*The Resolution adopted by the House is reproduced below :—*

**"That Madam Speaker be requested to convey to Sri Te. Hanumanthappa, B.A. (Hons), B L., on his retirement from the Office of the Secretary, Karnataka Legislature, an expression of Members' deep appreciation of the service which he has rendered to this House for the last 12 years, their admiration for his profound knowledge of its procedure and practice, their gratification for the help constantly and readily given to them, and their recognition of the great work he has done".**

## REPORT OF THE COMMITTEE ON GOVERNMENT ASSURANCES PRESENTATION

SRI K. M. RUDRAPPA.— Madam, I beg to present the report of the Committee on Government Assurances on Industrial Pollution.

MADAM.—The report is presented.

## PRESENTATION OF PETITION

SRI K. SUBRAMANYA GOWDA.— Madam, I beg to present the following petitions.

(i) Petition signed by the President, Town Municipal Council, Belthangady and others regarding redressal of grievances of ugranis of South Kanara.

(ii) Petition signed by the Organisation Secretary, Harijans and Scheduled Tribes Congress, South Kanara.

MADAM SPEAKER.— The petitions are presented.

## Matter under Rule 312

*re : Film Development Corporation*

† ಶ್ರೀ ಸಿ. ಬೈರೇಗಾಡ. (ವೇಮಗರ್).—ಮಾನ್ಯ ಅಧ್ಯಕ್ಷರೇ, ಈ ಫಿಲಂ ಡೆವಲಪ್‌ಮೆಂಟ್ ಕಾರ್ಪೋರೇಷನ್ನಿನಲ್ಲಿ ಈಗ ಈ ಇಂಡಸ್ಟ್ರೀಸ್ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಸಾಲಸೌಲಭ್ಯಗಳನ್ನು ಕೊಡುತ್ತಾ ಇದ್ದಾರೆ. ಆದರೆ ಈ ವರ್ಷ 10-12 ಅರ್ಜಿಗಳು ಸಾಲಕ್ಕಾಗಿ ಬಂದಿದ್ದವು. ಅವುಗಳಲ್ಲಿ 3-4ನ್ನು ಮಾತ್ರ ಅರಿಸಿಕೊಂಡಿದ್ದಾರೆ. ಹೀಗೆ ಅರಿಸಿರತಕ್ಕಂಥಾ ಅರ್ಜಿಗಳ ಬಗ್ಗೆ ಮೆರಿಟ್ಸ್ ಅಂಡ್ ಡೀಮೆರಿಟ್ಸ್ ಬಗ್ಗೆ ಹೇಳಿಕೊಳ್ಳುವಂಥಾದ್ದು ಏನೂ ಇಲ್ಲ. ಯಾವುದಾದರೂ ಆಗಲಿ ಈ ಬಗ್ಗೆ ಒಳ್ಳೆಯ ಚಿತ್ರವನ್ನು ಅರಿಸಬೇಕಾದರೆ ಈ ಗುಣಗಳು ಬೇಕು ಉತ್ತಮವಾದಂಥಾ ಕಥೆ, ನಿರೂಪಣೆ, ಉತ್ತಮವಾದ ಡೈರೆಕ್ಟರ್ ಇರಬೇಕು. ದೇಶಕ್ಕೆ ಮತ್ತು ನಮ್ಮಾಜಕ್ಕೆ ಸಹಾಯವಾಗತಕ್ಕಂಥಾ ಒಳ್ಳೆಯ ಚಿತ್ರವನ್ನು ತಯಾರಿಸಬೇಕು. ಜೊತೆಗೆ ಇದರ ಕಥೆ ಬಹಳ ಮುಖ್ಯವಾದುದಾಗಿರಬೇಕು. ಇಷ್ಟನ್ನೂ ಒಳಗೊಂಡಿದಂತೆ ಇರುವ ದಾಖಲು ಮತ್ತು ಹರಕೆ ಈ ಎರಡು ಚಿತ್ರಣ